

ಮುಪ್ಪು ಜೀವದಿಂದ ಚಿಗುರು ಮಾವಿಗೆ ಉಪಚಾರ

ಬಿಟ್ಟರೂ ನಾನು ಬಿಡಲಿಲ್ಲ. 'ಸಂಬಳ ಹೆಚ್ಚು ಮಾಡಿ, ಸಾಕಾಗುವುದಿಲ್ಲ' ಎಂದೂ ಯಾವತ್ತೂ ಹೇಳಿಲ್ಲ. ಇದ್ದ ಸಂಬಳದಲ್ಲಿಯೇ ಸಂತೋಷಪಡ್ತಿದ್ದೆ. ಗಿಡಗಳ ಜೊತೆ ಕೆಲಸ ಮಾಡುವುದು ಖುಷಿಯಾಗ್ತಿತ್ತು. ತುಂಬಾ ದಿನ ಬಾಲೆಯನ್ನು ಪಕ್ಕದಲ್ಲಿಟ್ಟುಕೊಂಡು ಕೆಲಸ ಮಾಡಿದ್ದಿದೆ. ನನ್ನ ಪ್ರಾಮಾಣಿಕ ಕೆಲಸಕ್ಕೆ ಈಗ ಒಂದು ಫಲ ಸಿಕ್ಕಿದೆ ಎಂಬುದೇ ಸಮಾಧಾನ.

**◆ ಯಾವ ಯಾವ ತರಹದ ಗಿಡಗಳನ್ನು ತಯಾರು ಮಾಡುತ್ತಿದ್ದಿರಿ?**

ರಾಶಿ ತರದ ಗಿಡಗಳನ್ನು ಬೆಳೆಸಿದ್ದೇನೆ. ಈಗ ಎಲ್ಲವೂ ನೆನಪಿಲ್ಲ. ಮತ್ತಿ, ಕಿಂದಾಳ, ಹೊನ್ನೆ, ಸಾಗವಾನಿ, ಹೊಳೆದಾಸಾಳ, ಸೀಸಮ್, ಅಂಟವಾಳ, ನೆಲ್ಲಿ, ಹುಣಸೆ, ಭರಣಗಿ, ಮಾವು, ಹಲಸು, ಗೇರು, ನೇರಲು, ಆಲ, ಬಸರಿ, ಬಿದಿರು, ಬಂದಗ, ಕೆಂಪು ಬಂದಗ, ಅತ್ತಿ ಇನ್ನೂ ಬಹಳಷ್ಟು ಗಿಡಗಳನ್ನು ರಾಶಿ ರಾಶಿಯಾಗಿ ಬೆಳೆಸಿದ್ದೇನೆ.

**◆ ಬೀಜ ಸಂಸ್ಕರಣೆ ಮತ್ತು ಗಿಡಗಳ ತಯಾರಿಕೆ ಹೇಗೆ?**

ಮತ್ತಿ, ಕಿಂದಾಳ ಮುಂತಾದ ಗಿಡಗಳ ಬೀಜಗಳು ನೆಲಕ್ಕೆ ಬೀಳುತ್ತ ಇದ್ದಂತೆ ಅದನ್ನು ಹೆಕ್ಕಿ ತಂದು ತೊಳೆದು ಒಣಗಿಸಿ ಮಣ್ಣು ಹದ ಮಾಡಿ, ಮಡಿ ತಯಾರಿಸಿ ಬೀಜವನ್ನು ಹಾಕುತ್ತೇನೆ. ಗಿಡಹುಟ್ಟಿ ಸ್ವಲ್ಪ ದೊಡ್ಡದಾಗುತ್ತಿದ್ದಂತೆ ಪ್ಲಾಸ್ಟಿಕ್ ಕೊಟ್ಟೆಯಲ್ಲಿ ಹಾಕಿ ಪ್ರತಿದಿನ ನೀರು ಹಾಕುತ್ತಿದ್ದೆ. ಮೊದಲೆಲ್ಲ ಕೊಡದಲ್ಲೇ ಹಾಕುತ್ತಿದ್ದೆ. ಈಗ ಪೈಪ್ ಮೂಲಕ, ಜೆಟ್ ಮೂಲಕ ನೀರು ಹಾಕುತ್ತಾರೆ.

**◆ ಅರಣ್ಯ ಇಲಾಖೆಯಲ್ಲಿ ಎಷ್ಟು ವರ್ಷ ಕೆಲಸ ಮಾಡಿದ್ದೀರಿ? ಮತ್ತು ನೀವು ಕೆಲಸ ಮಾಡಿದ ನರ್ಸರಿ ಎಲ್ಲಿದೆ?**

ಅರಣ್ಯ ಇಲಾಖೆಯಲ್ಲಿ ಸುಮಾರು 50